**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 805/2021**

| | | | |
|---|---|---|---|
| **ಹೆಸರು** | **:** | **ಅಬ್ದುಲ ಸಲಾಮ** | **ದೋ.ಸಾ. 2** |
| **ತಂದೆಯ ಹೆಸರು** | **:** | **ಮಸ್ತಾನಸಾಬ** | **ಪ್ರಾ.ಸಾ. 2** |
| **ವಯಸ್ಸು** | **:** | **48 ವರ್ಷ** | **ದಿನಾಂಕಃ 10-04-2023** |
| **ಉದ್ಯೋಗ** | **:** | **ಚಾಲಕ** | |
| **ವಾಸಸ್ಥಳ** | **:** | **ಕುಪನೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಪ್ರಾಸಾ-1, ಚಾಸಾ-3 ರಿಂದ 8 ಮತ್ತು 11 ಹಾಗೂ 12 ರವರು ನನಗೆ ಗೊತ್ತು. ಮೃತ ನನಗೆ ಗೊತ್ತು. ಮೃತ ನಾಗಪ್ಪ ಆಟೋ ಅಪಘಾತದಲ್ಲಿ ಮೃತಪಟ್ಟಿದ್ದಾನೆ.

ದಿನಾಂಕಃ 09-10-2020 ರಂದು ಸುಮಾರು ಮಧ್ಯಾಹ್ನ 2.30 ಗಂಟೆ ಸುಮಾರಿಗೆ ನಾನು ನನ್ನ ಆಟೋವನ್ನು ಚಲಾಯಿಸುತ್ತಿದ್ದೆ. ಆಗ ನಾಗಪ್ಪ, ಚಾಸಾ-3 ಹಾಗೂ 4 ರವರು ಸಂತೆ ಮಾಡಿಕೊಂಡು ಬಸವೇಶ್ವರ ಸರ್ಕಲದಲ್ಲಿ ನನ್ನ ಆಟೋದಲ್ಲಿ ಕುಳಿತಿದ್ದರು. ಅವರು ನನಗೆ ಕುಪನೂರಗೆ ಬಿಡಲು ಹೇಳಿದ್ದರು. ಸುಲೆಪೇಟನಿಂದ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಹೊರಟಿದ್ದೆ. ಸುಲೆಪೇಟದಿಂದ 4 ಕಿ.ಮೀ ದೂರ ಹೋದಾಗ ಮಹಿಪಾಲರೇಡ್ಡಿರವರ ತೋಟದ ಹತ್ತಿರ ಎದುರುಗಡೆಯಿಂದ ಆಟೋ ವೇಗವಾಗಿ ಬಂದು ನನ್ನ ಆಟೋಕ್ಕೆ ಡಿಕ್ಕಿ ಪಡಿಸಿತು. ಆದ್ದರಿಂದ ನಮ್ಮ ಆಟೋ ಪಲ್ಟಿಯಾಗಿ ರಸ್ತೆಯ ಪಕ್ಕದಲ್ಲಿ ಮೃತ ನಾಗಪ್ಪ ಮತ್ತು ಚಾಸಾ-3 ರವರ ಮೇಲೆ ಬಿದ್ದಿತ್ತು. ನಾನು ಸಹ ಆಟೋದಿಂದ ಕೆಳಗಡೆ ಬಿದ್ದಿದ್ದೆ. ಮೃತನಾಗಪ್ಪನಿಗೆ ಎಡಗೈ, ಬೆನ್ನಿನ ಮೇಲೆ, ಮತ್ತು ತಲೆಗೆ ಕೈ ಹಾಗೂ ಕಾಲುಗಳಿಗೆ ಗಾಯಗಳಾಗಿದ್ದವು. ಚಾಸಾ-3 ರವರ ಎಡಗೈ ಮೇಲೆ ಆಟೋ ಬಿದ್ದು ಗಾಯ ಆಗಿತ್ತು. ಮತ್ತು ಉಳಿದವರಿಗೆ ಸ್ವಲ್ಪಗಾಯಗಳಾಗಿದ್ದವು. ನನಗೆ ಎಡಭುಜಕ್ಕೆ ಗಾಯವಾಗಿತ್ತು. ನಮಗೆ ಡಿಕ್ಕಿಪಡಿಸಿದ ಆಟೋ ಚಾಲಕನಿಗೆ ಯಾವದೇ ಗಾಯ ಆಗಿರಲ್ಲಿಲ್ಲ. ನಾನು ಮೃತನಾಗಪ್ಪನ ಸಂಬಂಧೀಕರು ಘಟನಾ ಸ್ಥ,ಳಕ್ಕೆ ಬಂದಿದ್ದರು ನಾಗಪ್ಪ ಹಾಗೂ ಚಾಸಾ-3 ರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಸುಲೆಪೇಟ ಆಸ್ಪತ್ರೆಗೆ ಮಧ್ಯಾಹ್ನ 3 ರಿಂದ 3.30 ಗಂಟೆ ಸುಮಾರಿಗೆ ಹೋಗಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮುಜಿಂಬದಾರ ಆಸ್ಪತ್ರೆ, ಕಲಬುರಗಿಗೆ ಮರುದಿನ ಮಧ್ಯಾಹ್ನ 12.00 ಗಂಟೆಗೆ

ಹೋಗಿದ್ದೇನೆ. ನನ್ನ ಆಟೋ ಸಂಃ KA 32 C 0733 ಇತ್ತು. ನಮಗೆ ಡಿಕ್ಕಿಪಡಿಸಿದ ಆಟೋ ಸಂಖ್ಯೆಃ KA 32 D 7361 ಇತ್ತು.

ನಮಗೆ ಡಿಕ್ಕಿಪಡಿಸಿದ ಆಟೋವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದ. ಆರೋಪಿ ತನ್ನ ಆಟೋವನು ಅತೀವೇಗವಾಗಿ ಅಂದರೆ 50 ರ ಮೇಲೆ ವೇಗದಲ್ಲಿ ಬಂದು ಡಿಕ್ಕಿಪಡಿಸಿದ ಕಾರಣ ಅಪಘಾತ ಆಗಿತ್ತು. ನನ್ನ ವಾಹನ 25 ರಿಂದ 30 ವೇಗದಲ್ಲಿತ್ತು. ಸಾಕ್ಷಿಗೆ ಮೂರು ಭಾವಚಿತ್ರಗಳನ್ನು ತೋರಿಸಿ ಕೇಳಿದಾಗ ಅದರಲ್ಲಿರುವ ಆಟೋ ಆರೋಪಿಯದ್ದು ಹಾಗೂ ಇನ್ನೊಂದು ಆಟೊ ನನ್ನದು ಎಂದು ನುಡಿದಿದ್ದಾರೆ. ಆದ್ದರಿಂದ ಸದರಿ ಭಾವಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿರುವ ಹಳದಿ ಬಣ್ಣದ ಆಟೋ ಆರೋಪಿಯದ್ದು ಮತ್ತು ಕಪ್ಪು ಬಣ್ಣದ ಇರುವ ಆಟೋ ನನ್ನದು ಹಾಗೂ ನಿಪಿ-4 ಮತ್ತು ನಿಪಿ-5 ರಲ್ಲಿ ಇರುವ ಆಟೋ ಆರೋಪಿಯದ್ದು ಎಂದು ನುಡಿದಿದ್ದಾರೆ. ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿ ಕೇಳಿದಾಗ ಅದರಲ್ಲಿರುವದು ತಾವೆ ಎಂದು ನುಡಿದಿದ್ದಾರೆ. ಆದ್ದರಿಂದ ಸದರಿ ಭಾವಚಿತ್ರವನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರ ಭಾವಚಿತ್ರದಲ್ಲಿ ನನ್ನ ಜೊತೆ ನಮ್ಮ ಊರಿನವರು ಹಾಗೂ ಪೊಲೀಸರು ಇರುತ್ತಾರೆ. ನಿಪಿ-6 ಭಾವಚಿತ್ರವನ್ನು ಘಟನಾ ಸ್ಥಳದಲ್ಲಿ ಘಟನೆ ನಡೆದ ಮರುದಿನ ಪೊಲೀಸರು ತೆಗೆದುಕೊಂಡಿದ್ದಾರೆ. ಘಟನೆಯ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿದ್ದೇನೆ.

ಘಟನೆ ನಡೆದಾದ ಮೇಲೆ ನಾನು ಪೊಲೀಸ ಠಾಣೆಗೆ ಹೋಗಿದ್ದೇನೆ. ಆರೋಪಿ ಸಹ ಸುಲೆಪೇಟನಲ್ಲಿ ಆಟೋ ಚಲಾಯಿಸುತ್ತಿರುವ ಕಾರಣ ಅವನ ಹೆಸರು ನನಗೆ ಗೊತ್ತು. ಘಟನೆಯಾದ ಮೇಲೆ ಆರೋಪಿ ತನ್ನ ವಾಹವನ್ನು ಬಿಟ್ಟು ಘಟನಾ ಸ್ಥಳದಿಂದ ಓಡಿಹೋಗಿದ್ದ. ನಾಗಪ್ಪ ಮೃತಪಟ್ಟಿರುವ ಬಗ್ಗೆ ಚಾಸಾ-8 ರವರು ನನಗೆ ಕರೆ ಮಾಡಿ ತಿಳಿಸಿದರು.

ಘಟನೆ ನಡೆದಾಗ ನನ್ನ ಆಟೋ ರಸ್ತೆಯ ಎಡಭಾಗಕ್ಕೆ ಬಿದ್ದಿತ್ತು. ಆರೋಪಿಯ ಆಟೋ ರಸ್ತೆಯ ಬಲಭಾಗದಲ್ಲಿ ಡಿಕ್ಕಿ ಪಡಿಸಿ ನಿಂತಿತ್ತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ.**